ಉಪಾಧ್ಯಕ್ಷರು: ಮಾನ್ಯ ಪಾಟೀಲ್‌ರವರು ಈಗಾಗಲೇ ಒಂದು ವರ್ಷವಾಯಿತು ಏನೂ ಕೆಲಸ ಆಗಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: 15 ದಿವಸದಲ್ಲಿ ಅದನ್ನು ಬಗೆಹರಿಸುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಉಪಾಧ್ಯಕ್ಷರು: ಇನ್ನು 15 ದಿವಸದಲ್ಲಿ ಆ ಕೆಲಸವನ್ನು ಪೂರ್ತಿ ಮಾಡಿ. ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿ ಮತ್ತು ಎಸ್. ಚಿಕ್ಕಮಾದುರವರು ಸದನದಲ್ಲಿಲ್ಲ. ಮಾನ್ಯ ಪುಟ್ಟರಂಗಶೆಟ್ಟಿಯವರೆ ತಾವು ಕೇಳಿ.

6. ವಿಷಯ: ಚಾಮರಾಜನಗರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ.

====

ಶ್ರೀ ಸಿ. ಪುಟ್ಟರಂಗಶೆಟ್ಟಿ (ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೆ, ಚಾಮರಾಜನಗರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಸಚಿವರು ಇಲ್ಲ ನಾಳೆ ಇದಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡಿಸುತ್ತೇನೆ.

ಶ್ರೀ ಸಿ. ಪುಟ್ಟರಂಗಶೆಟ್ಟಿ: ಆಯಿತು.

ಉಪಾಧ್ಯಕ್ಷರು: ಮಾನ್ಯ ಪಿಳ್ಳಮುನಿಶಾಮಪ್ಪರವರೆ ನಿಮ್ಮ ಪ್ರಶ್ನೆಗೆ ಉತ್ತರವು ಬಂದಿರುವುದಿಲ್ಲ.

ಶ್ರೀ ಪಿಳ್ಳಮುನಿಶಾಮಪ್ಪ: ಮಾನ್ಯ ಉಪಾಧ್ಯಕ್ಷರೆ, ನಿನ್ನೆಯೂ ಸಹ ಉತ್ತರ ಬಂದಿಲ್ಲ. ಆದರೆ ಈ ಬಗ್ಗೆ ನಾನು ಹೇಳಿಬಿಡುತ್ತೇನೆ. ನಾನು ಈ ವಿಚಾರವನ್ನು ಹೇಳಿಬಿಡುತ್ತೇನೆ.

ಉಪಾಧ್ಯಕ್ಷರು: ನಿಮ್ಮ ಪ್ರಶ್ನೆಗೆ ನಾಳೆ ಉತ್ತರವನ್ನು ಕೊಡಿಸುತ್ತೇನೆ. ನೀವು ಹೇಳಿದರೂ ಮಾನ್ಯ ಮಂತ್ರಿಗಳು ಸದನದಲ್ಲಿ ಇಲ್ಲವಲ್ಲ.

ಶ್ರೀ ಪಿಳ್ಳಮುನಿಶಾಮಪ್ಪ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ನಿಯಮ 198(ಡಿ)ರಂತೆ ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬರುವ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸದಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯುತ್ತೇನೆ. ಈ ಮೂಲಕ ಒಂದು ವಿಷಯವನ್ನು ಹೇಳುತ್ತೇನೆ. ಆಡಳಿತ ಮತ್ತು ಅಭಿವೃದ್ಧಿ ಇರಬಹುದು ಎಲ್ಲಾ ಕೇಂದ್ರಗಳಲ್ಲೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಆದಷ್ಟೂ ಒಂದು ಕೆಟ್ಟ ಪರಿಸ್ಥಿತಿಯಲ್ಲಿದೆ. ದಯವಿಟ್ಟು ಉತ್ತರವನ್ನು ಕೊಡಿಸಿಕೊಡಬೇಕು. ನಾನು 38 questions ಅನ್ನು ಹಾಕಿದ್ದೇನೆ. ಒಂದು ಪ್ರಶ್ನೆಯೂ starred ಆಗಲಿಲ್ಲ. ನಾನು ನನ್ನ ಕ್ಷೇತ್ರದ ಬಗ್ಗೆ ಏನು ಕೇಳೋಣ ಎಂಬ ಆತಂಕ ನನಗೆ ಆಗುತ್ತಿದೆ.

ಉಪಾಧ್ಯಕ್ಷರು: ಆಯಿತು. ನಿಮ್ಮ ಪ್ರಶ್ನೆಗೆ ನಾಳೆ ಉತ್ತರವನ್ನು ತರಿಸಿ ಕೊಡುತ್ತೇನೆ. ಶ್ರೀ ಸಿದ್ದು ಬಿ ನ್ಯಾಮಗೌಡ ಇಲ್ಲ, ಶ್ರೀ ಕೆ.ಎಂ.ಶಿವಲಿಂಗೇಗೌಡರ ಪ್ರಶ್ನೆಗೆ ಉತ್ತರ ಬಂದಿಲ್ಲ. ಶ್ರೀ ಆರ್. ಜಗದೀಶ್ ಕುಮಾರ್, ಶ್ರೀ ಎಲ್.ಎ.ರವಿಸುಬ್ರಮಣ್ಯ, ಸದನದಲ್ಲಿಲ್ಲ. ಮಾನ್ಯ ಹೆಚ್.ಎಸ್.ಪ್ರಕಾಶ್, ರವರೆ ಕೇಳಿ.

7. **ವಿಷಯ:** ಹಾಸನ ತಾಲ್ಲೂಕು ಕಸಬಾ ಹೋಬಳಿ ಬೂವನಹಳ್ಳಿ ಗ್ಯಾರಹಳ್ಳಿ, ದೊಡ್ಡಕೊಂಡಗೊಳ ಮಾವಿನಹಳ್ಳಿ ಗ್ರಾಮಗಳ ಕೆರೆ ಮತ್ತು ಕಾಲುವೆಗಳನ್ನು ಮುಚ್ಚಿ ಬಡಾವಣೆ ನಿರ್ಮಿಸುತ್ತಿರುವ ಬಗ್ಗೆ.

====

ಶ್ರೀ ಹೆಚ್.ಡಿ. ರೇವಣ್ಣ (ಮಾನ್ಯ ಹೆಚ್.ಎಸ್. ಪ್ರಕಾಶ್‌ರವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ಹಾಸನ ತಾಲ್ಲೂಕು ಕಸಬಾ ಹೋಬಳಿ ಬೂವನಹಳ್ಳಿ ಗ್ಯಾರಹಳ್ಳೀ, ದೊಡ್ಡಕೊಂಡಗೊಳ ಮಾವಿನಹಳ್ಳಿ ಗ್ರಾಮಗಳ ಕೆರೆ ಮತ್ತು